






ದೇವಾಲಯಗಳು ಒಂದು ವಿಶಿಷ್ಟ ಅನುಭೂತಿ ನೀಡುವುದಂತೂ ಖಚಿತ.

ಕಿಕ್ಯಾಕ್ ಫೈರ್ ಡ್ಯಾನ್ಸ್ ನಡೆಯುವುದು ಸಂಜೆ ಆರರಿಂದ ಏಳರ ತನಕ. ಅಲ್ಲೇ ಪುಟ್ಟ ಸ್ಟೇಡಿಯಂ ಸುತ್ತ ಕಲ್ಲುಹಾಸುಗಳು. ನಾಲ್ಕು ಗಂಟೆಗೇ ಜನ ಸೇರಲಾರಂಭಿಸಿದ್ದರು. ನಾವೂ ನಮ್ಮ ಜಾಗಗಳನ್ನು ಭದ್ರಪಡಿಸಿಕೊಂಡೆವು. ಸೂರ್ಯ ಆಗಲೇ ತನ್ನ ಕೆಲಸ ಮುಗಿಸಿಕೊಂಡು ಆಗಸಕ್ಕೆಲ್ಲ ಕೆಂಪನ್ನಡರಿ ನಿಧಾನವಾಗಿ ತನ್ನ ಮನೆಯತ್ತ ಸಾಗಿದ್ದ. ಹಾ... ಈ ಜಾಗ 'ಸೂರ್ಯ ಮುಳುಗುವ ಪ್ರಪಂಚದ ಹನ್ನೊಂದನೇ ಸುಂದರ ತಾಣ' ಎಂದು ಗುರುತಿಸಿಕೊಂಡಿದೆ ಕೂಡ. ಆಗಸವನ್ನು ನೋಡುತ್ತಾ ಮೈಮರೆತಿದ್ದಾಗಲೇ ಸ್ಟೇಡಿಯಂ ತುಂಬಾ ಜನ ಗಿಜಿಗುಟ್ಟಲಾರಂಭಿಸಿದರು.

ಸ್ಟೇಡಿಯಂನ ಮಧ್ಯದಲ್ಲಿ ಒಂದು ದೀಪವನ್ನು ಇರಿಸಲಾಗಿತ್ತು. ಮೊದಲಿಗೆ ಪುರೋಹಿತ ಎನಿಸಿಕೊಂಡವರು ಬಂದು ಪೂಜೆ ಸಲ್ಲಿಸುತ್ತಾರೆ. ನಂತರ ಬರುವ ಕಲಾವಿದರೆಲ್ಲರೂ ಕಪ್ಪು ಬಿಳಿ ಬಣ್ಣದ ಚೌಕಳಿಯ ಸಾಂಪ್ರದಾಯಿಕ ಉಡುಪನ್ನು ಧರಿಸಿರುತ್ತಾರೆ, ನಮ್ಮ ಬಯಲಾಟದ ರೀತಿಯಲ್ಲಿ. ತೆರೆದ ಜಾಗದಲ್ಲಿ ನಡೆಯುವ ನೃತ್ಯ ಪ್ರಕಾರ ಇದಾಗಿದ್ದು, ಸುಮಾರು ಮೂವತ್ತಕ್ಕೂ ಹೆಚ್ಚು ಕಲಾವಿದರು ಗುಂಪುಗುಂಪಾಗಿ ಬಂದು ಅವರದೇ ಆದ ಒಂದು ವಿಶಿಷ್ಟ ರೀತಿ ಸುತ್ತಲೂ ಕುಳಿತು 'ಕಿಕ್ ಕ್ಯಾಕ್ ಕಿಕ್ಯಾಕ್' ಎಂದು ಹೇಳುತ್ತಾ ನೃತ್ಯ ಆರಂಭಿಸುತ್ತಾರೆ. ಪದ್ಮಾಸನ ಹಾಕಿ ಕುಳಿತು ಭುಜವನ್ನು ಎಲ್ಲರೂ ಒಂದೇ ರೀತಿ ತಾಳಬದ್ಧವಾಗಿ ಕುಣಿಸುತ್ತಾ ಕಿಕ್ ಕ್ಯಾಕ್ ಕಿಕ್ಯಾಕ್ ಸ್ವರವನ್ನು ಬಿಡದೇ ಹೇಳುತ್ತಲೇ ಇರುತ್ತಾರೆ. ಇದರ ಮಧ್ಯೆ ಪುರೋಹಿತರು ಬಂದು ದೀಪ ಹಚ್ಚಿ ತೀರ್ಥವನ್ನು ಎಲ್ಲರ ತಲೆಯ ಮೇಲೆ ಪ್ರೋಕ್ಷಣೆ ಮಾಡುತ್ತಾರೆ.

'ರಾಮಾಯಣ' ಕಥೆಯೇ ಈ ನೃತ್ಯದ ಮೂಲ. ಕಥೆಯನ್ನು ನಾಲ್ಕು ಹಂತಗಳಾಗಿ ವಿಭಾಗಿಸಿ ಒಂದು ಗಂಟೆ ಸಮಯದಲ್ಲಿ ಇಡೀ ರಾಮಾಯಣವನ್ನು ಸರಳವಾಗಿ ನೃತ್ಯದ ಮೂಲಕ ನಿರೂಪಿಸುತ್ತಾರೆ.

ರಾಮ, ಸೀತೆ ಕಾಡಿನಲ್ಲಿ ವಿಹರಿಸುವಾಗ ಅಲ್ಲಿಗೆ ಬಂದ ಚಿನ್ನದ (ಮಾಯಾಜಿಂಕೆ) ಜಿಂಕೆಯನ್ನು ಕಂಡು ಸೀತೆ ಮೋಹಿತಳಾಗುತ್ತಾಳೆ. ರಾಮ ಅದನ್ನು ತರಲು ಹೊರಡುತ್ತಾನೆ. ಲಕ್ಷ್ಮಣ ಸೀತೆಯ ಕಾವಲಿಗೆ ಇರುತ್ತಾನೆ. ರಾಮನಿಗೆ ಏನೋ ತೊಂದರೆಯಾಗಿದೆ ಎಂದರಿತ ಸೀತೆ ಲಕ್ಷ್ಮಣನನ್ನು ಹೋಗು ಎನ್ನುವಂತೆ ಆಜ್ಞಾಪಿಸುತ್ತಾಳೆ. ಲಕ್ಷ್ಮಣ, ಸೀತೆ ಹೊರ ಬರದಂತೆ 'ಲಕ್ಷ್ಮಣರೇಖೆ' ಹಾಕಿ ಹೊರಡುತ್ತಾರೆ. ಅಷ್ಟರಲ್ಲಿ ಅಲ್ಲಿಗೆ ಬಂದ ರಾವಣ ಸೀತೆಯನ್ನು ಅಪಹರಿಸಲು ನೋಡುತ್ತಾನೆ. ಸಾಧ್ಯವಾಗದೇ ಬ್ರಾಹ್ಮಣನ ವೇಷದಲ್ಲಿ ಬಂದು ಸೀತೆಯನ್ನು ಅಪಹರಿಸುತ್ತಾನೆ. ಜಟಾಯು ರಾವಣನೊಂದಿಗೆ ಯುದ್ಧ ಮಾಡುತ್ತಾನೆ... ಹೀಗೆ ಕಥೆ ಸಾಗುತ್ತದೆ.

ಹನುಮಂತನ ಪಾತ್ರಧಾರಿ ಜನಗಳ ಮಧ್ಯದಿಂದ ಪ್ರತ್ಯಕ್ಷವಾದ ಪರಿ, ನಾವೂ ಕಥೆಯಲ್ಲಿ ಒಂದಾದಂಥ ಭಾವ ತರುತ್ತದೆ. ಲಂಕಾ ದಹನ ಮಾಡುವಾಗ ನಿಜವಾಗಿಯೂ ಸುತ್ತಲೂ ಬೆಂಕಿ ಹಚ್ಚುತ್ತಾರೆ. ರಾಮ, ಸೀತೆಯ ಪಾತ್ರದ ಅಲಂಕಾರ ಅತ್ಯಂತ ವಿಶಿಷ್ಟವಾಗಿ ಮನಸೆಳೆಯುವಂತಿದ್ದು, ರಾವಣನ ಉಡುಗೆ ತೊಡುಗೆ ಅದ್ಭುತ. ಜಟಾಯು, ಜಾಂಬವಂತ, ಸುಗ್ರೀವ ವಿಶಿಷ್ಟ ರೀತಿಯ ಅಲಂಕಾರದ ಪಾತ್ರಧಾರಿಗಳಂತೂ ಕಣ್ಮನ ತುಂಬಿಕೊಳ್ಳುತ್ತಾರೆ.

ಈ ನೃತ್ಯಕ್ಕೆ ಯಾವುದೇ ಹಿನ್ನೆಲೆ ವಾದ್ಯಗಳಿರುವುದಿಲ್ಲ. ಯಾವುದೇ ಹಾಡುಗಳಿಲ್ಲ, ತಾಳ, ಮದ್ದಳೆಗಳಿಲ್ಲ. ಇಡೀ ಒಂದು ಗಂಟೆಯ ವಿಶಿಷ್ಟ ನೃತ್ಯದಲ್ಲಿ, ಸುತ್ತ ಕುಳಿತಿದ್ದ ಪಾತ್ರಧಾರಿಗಳು ನೃತ್ಯ ಪ್ರಾರಂಭವಾದಾಗಿನಿಂದ ಮುಗಿಯುವವರೆಗೂ ಸುತ್ತ ಕುಳಿತು ಭುಜಗಳನ್ನು ಕುಣಿಸುತ್ತಾ ಎಲ್ಲರೂ ತಾಳಬದ್ಧವಾಗಿ ಸ್ವರ ಹೊರಡಿಸುವುದೇ ಹಿನ್ನೆಲೆ ಸಂಗೀತ, ವಾದ್ಯ. ಎಲ್ಲವೂ ಸೇರಿ ಒಂದು ವಿಶಿಷ್ಟ, ವಿನೂತನ ಶೈಲಿಯ ನೃತ್ಯ ಪ್ರಕಾರ ರೂಪುಗೊಳ್ಳುತ್ತದೆ. ಈ ನೃತ್ಯ ಪ್ರಕಾರ ನೋಡುತ್ತಾ, ನಮ್ಮ 'ಕಥಕ್', 'ಯಕ್ಷಗಾನ'ವೂ ಕಣ್ಮುಂದೆ ಸುಳಿದ ಹಾಗಾಗುತ್ತದೆ. ಆಗಸದಲ್ಲಿ ಸೂರ್ಯ ಅಸ್ತಮಿಸುವ ಸೊಬಗಿನೊಂದಿಗೆ ಈ ನೃತ್ಯದ ಚೆಲುವನ್ನು ಆಸ್ವಾದಿಸುತ್ತಾ ಪ್ರಕೃತಿಯ ಲಯದಲ್ಲಿ ನಾವೂ ಒಂದಾದಂಥ ಭಾವ ಮನಸ್ಸು ತುಂಬಿಕೊಳ್ಳುತ್ತದೆ.

ಪ್ರತಿಕ್ರಿಯಿಸಿ: feedback@sudha.co.in